# ಇಷ್ಟೊಂದು ಹೇಗೆ ಓದಲಿ?



■ ಪ್ರಕಾಶ ಎಸ್. ಮನ್ನಂಗಿ

ಪರೀಕ್ಷೆ ಸಮೀಪಿಸುತ್ತಿತ್ತು. ಮೇಜಿನ ಮೇಲಿದ್ದ ಓದಬೇಕಾದ ಪುಸ್ತಕಗಳ ರಾಶಿಯನ್ನು ನೋಡಿ ನಿಂಗ ಗಾಬರಿಯಾದ. ಆನ್‌ಲೈನ್ ಪಾಠಗಳೂ ಸರಿಯಾಗಿ ನಡೆದಿಲ್ಲ. ಶಾಲೆಯಲ್ಲೂ ಶಿಕ್ಷಕರು ಬೋಧಿಸಿಲ್ಲ. ಈಗ ಪರೀಕ್ಷೆ ಕೇವಲ ಒಂದು ತಿಂಗಳಿದೆ. ಇಷ್ಟೆಲ್ಲ ಪುಸ್ತಕಗಳನ್ನು ಓದುವುದಾದರೂ ಹೇಗೆ? ಚಿಂತಿಸಿದ ನಿಂಗ ಮರುದಿನ ಶಾಲೆಗೆ ಹೋಗಿ ತನ್ನ ತರಗತಿ ಶಿಕ್ಷಕರನ್ನು ಭೇಟಿಯಾದ. ಸಾರ್, ನನಗೆ ಇಷ್ಟು ಪುಸ್ತಕಗಳನ್ನು ಮೇಜಿನ ಮೇಲೆ ನೋಡಿ ಗಾಬರಿಯಾಗುತ್ತದೆ. ಯಾವ ಪುಸ್ತಕ ಮೊದಲು ಓದಲಿ, ಅನಂತರ ಯಾವುದನ್ನು ಓದಲಿ ತಿಳಿಯುವುದೇ ಇಲ್ಲ ಎಂದು ತನ್ನ ಕಷ್ಟವನ್ನು ಅವರಲ್ಲಿ ತೋಡಿಕೊಂಡ.

ಕುಬೇರಪ್ಪ ಅವರಿಗೆ ನಿಂಗ ಶಾಲೆಗೆ ಬಂದು ಸಮಸ್ಯೆ ಕೇಳಿದ್ದಕ್ಕೆ ಖುಷಿಯಾಯಿತು. ಅವನನ್ನು ಶಿಕ್ಷಕರ ಕೊಠಡಿಗೆ ಕರೆದೊಯ್ದು ಕೂಡಿಸಿಕೊಂಡು ಮಾತಿಗೆಳೆದರು. ನೋಡು ನಿಂಗ, ಮೊದಲು ಗೋಡೆ ಗಡಿಯಾರ ತಯಾರಿಸಿದಾಗ ಅದರಲ್ಲಿ ಕೇವಲ ಗಂಟೆ ಮತ್ತು ನಿಮಿಷದ ಮುಳ್ಳುಗಳು ಮಾತ್ರ ಇದ್ದವು.

ಹೊಸ ಆವಿಷ್ಕಾರದಲ್ಲಿ ತೊಡಗಿದ ಗಡಿಯಾರ ಕಂಪನಿಯು ಸೆಕೆಂಡಿನ ಮುಳ್ಳನ್ನು ಪರಿಚಯಿಸಿತು. ಆಗ ಸೆಕೆಂಡಿನ ಮುಳ್ಳು ಗಂಟೆ ಮುಳ್ಳನ್ನು ಅಣ್ಣಾ, ನನ್ನ ಕೆಲಸವೇನು? ಎಂದು ಕೇಳಿತು. ಗಂಟೆಯ ಮುಳ್ಳು ನೋಡು, ನಾನು ಗಂಟೆಗೊಮ್ಮೆ ಚಲಿಸಿ ಗಂಟೆಯನ್ನೂ, ನಿಮಿಷದ ಮುಳ್ಳು ನಿಮಿಷಕ್ಕೊಮ್ಮೆ ಚಲಿಸಿ ನಿಮಿಷವನ್ನೂ ಸೂಚಿಸುತ್ತೇವೆ. ಆದರೆ ನೀನು ಸೆಕೆಂಡಿಗೊಮ್ಮೆ ಚಲಿಸಬೇಕು ಎಂದು ವಿವರಿಸಿತು. ವಿವರಣೆ ಕೇಳಿದ ಸೆಕೆಂಡಿನ ಮುಳ್ಳು ಚಿಂತೆಗೀಡಾಯಿತು. ಒಂದು ಗಂಟೆಗೆ 60 ನಿಮಿಷ, ನಿಮಿಷಕ್ಕೆ 60 ಸೆಕೆಂಡು. ಹಾಗಾದರೆ ನಾನು ನಿಮಿಷಕ್ಕೆ 60 ಸಲ, ಒಂದು ಗಂಟೆಗೆ ಮೂರು ಸಾವಿರದ ಆರು ನೂರು ಸಲ ಚಲಿಸಬೇಕು. ಒಂದು ದಿನಕ್ಕೆ ಎಂಬತ್ತಾರು ಸಾವಿರದ ನಾಲ್ಕು ನೂರು ಸಲ, ಒಂದು ವರ್ಷಕ್ಕೆ ಮೂರು ಕೋಟಿ ಹದಿನೈದು ಲಕ್ಷದ ಮೂವತ್ತಾರು ಸಾವಿರ ಸಲ ಚಲಿಸಬೇಕು. ಅಬ್ಬಾ, ಇಷ್ಟು ಸಲ ಚಲಿಸುವುದು ಹೇಗೆ ಸಾಧ್ಯ? ನಾನು ಸಾಕಾಗಿ ಹೋಗುತ್ತೇನೆ ಎಂದು ಹಿಂಜರಿಯತೊಡಗಿತು.

ಗಂಟೆಯ ಮುಳ್ಳು ಸೆಕೆಂಡಿನ ಮುಳ್ಳನ್ನು ಸಮಾಧಾನಿಸಿತು. ನೀನು ಮೂರು ಕೋಟಿ ಹದಿನೈದು ಲಕ್ಷದ ಮೂವತ್ತಾರು ಸಾವಿರದ ಚಲನೆಯನ್ನು ಒಮ್ಮೆಗೆ ಮಾಡಬೇಕಿಲ್ಲ. ಒಂದು ಸೆಕೆಂಡಿನ ಚಲನೆಯನ್ನು ಒಂದು ಸಲ ಮಾಡಿದರೆ ಸಾಕು. ಒಂದು ಸೆಕೆಂಡಿನ ಚಲನೆಯ ಅನಂತರ ಕೊಂಚ ಸಮಯವಿರುತ್ತದೆ. ಆಗ ನೀನು ಮತ್ತೊಂದು ಸೆಕೆಂಡು ಚಲಿಸಬೇಕು. ಹೀಗೇ ಸಾಗಿದರೆ ಆಯಿತು. ಒಮ್ಮೆಲೆ ಒಂದು ವರ್ಷದ ಚಲನೆಯನ್ನು ತಿಳಿದು ಏಕೆ ಗಾಬರಿಯಾಗುವೆ. ನೀನು ಒಂದೊಂದು ಸೆಕೆಂಡು ಚಲಿಸಿದರೆ ಆಯಿತಷ್ಟೇ. ಆಗ ಸೆಕೆಂಡಿನ ಮುಳ್ಳಿಗೆ ನೆಮ್ಮದಿಯೆನಿಸಿತು. ತನ್ನ ಕಾರ್ಯವನ್ನು ಆರಂಭಿಸಿತು. ವರ್ಷ ಪೂರ್ತಿ ಹೀಗೇ ಚಲಿಸಿ ಗೆಲುವು ಸಾಧಿಸಿತು.

ನಿಂಗ, ಈಗ ಹೇಳು. ಮೇಜಿನ ತುಂಬ ಪುಸ್ತಕಗಳನ್ನು ರಾಶಿ ರಾಶಿ ಜೋಡಿಸಿಡಬೇಡ. ಒಂದೊಂದೇ ಪುಸ್ತಕವನ್ನು ತೆಗೆದು ಓದಿ ಮುಗಿಸು. ಅನಂತರ ಮತ್ತೊಂದು ಪುಸ್ತಕ ಕೈಗೆತ್ತಿಕೋ. ಬೇಜಾರಾದಾಗ ವಿಷಯ ಬದಲಿಸು. ಅದೇ ನಿನಗೆ ವಿಶ್ರಾಂತಿ. ಒಂದು ಪುಸ್ತಕದ ಅನಂತರ ಮತ್ತೊಂದು ಪುಸ್ತಕ, ಒಂದು ಅಧ್ಯಾಯದ ಅನಂತರ ಮತ್ತೊಂದು ಅಧ್ಯಾಯ ಓದುತ್ತಿರು. ಹೀಗೆ ಓದುವುದರಿಂದ ಓದು ಸರಳವಾಗಿ ಸಾಗುತ್ತದೆ. ಅರ್ಥವೂ ಆಗುತ್ತದೆ. ಗಾಬರಿಯಾಗುವುದು ತಪ್ಪುತ್ತದೆ ಎಂದು ಶಿಕ್ಷಕರು ಉದಾಹರಣೆಯೊಂದಿಗೆ ಮನದಟ್ಟು ಮಾಡಿದರು. ನಿಂಗ ಮತ್ತೆ ಹೊಸ ಹುಮ್ಮಸ್ಸಿನಿಂದ ಓದಲು ಅಣಿಯಾದ. ■